# ನಾರಾಯಣ ನಿನ್ನ ನಾಮದ ಸ್ಮರಣೆಯ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru, page No. 28.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 46.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 324.
4. **Note:** Lyrics given here are as per Ref. 1 above. The wordings in Ref. 2 are same as in Ref. 1. The wordings in Ref. 3 are slightly different and has only 5 stanzas. Ref. 3 is not considered here.
5. **Note:** Ankita is different in Ref. 1 and Ref. 3. We have considered Ref.1 as standard and taken that Ankita for listing.
6. **Note:** Singer has followed lyrics as in Ref. 1.

ರಾಗ: ಆನಂದಭೈರವಿ ತಾಳ: ಆದಿ

ನಾರಾಯಣ ನಿನ್ನ ನಾಮದ ಸ್ಮರಣೆಯ
ಸಾರಾಮೃತವೆನ್ನ ನಾಲಿಗೆಗೆ ಬರಲಿ || ಪ ||

ಕೂಡುವಾಗಲು ನಿಂತಾಡುವಾಗಲು ಮತ್ತೆ
ಹಾಡುವಾಗಲು ಹರಿದಾಡುವಾಗ
ಖೋಡಿ ವಿನೋದದಿ ನೋಡದೆ ನಾ ಬಲು
ಮಾಡಿದ ಪಾಪ ಬಿಟ್ಟೋಡಿ ಹೋಗುವ ಹಾಗೆ || 1 ||

ಊರಿಗೆ ಹೋಗಲಿ ಊರೊಳಗಿರಲಿ
ಕಾರಣಾರ್ಥಗಳೆಲ್ಲ ಕಾದಿರಲಿ
ವಾರಿಜನಾಭ ನರ-ಸಾರಥಿ ಸನ್ನುತ
ಸಾರಿ ಸಾರಿಗೆ ನಾ ಬೇಸರಿಯದ ಹಾಗೆ || 2 ||

ಹಸಿವು ಇದ್ದಾಗಲಿ ಹಸಿವಿಲ್ಲದಾಗಲಿ

ರಸ-ಕಸವಿರಲಿ ಹರುಷವಿರಲಿ
ವಸುದೇವಾತ್ಮಜ ಶಿಶುಪಾಲಕ್ಷಯ
ಅಸುರಾಂತಕ ನಿನ್ನ ಹೆಸರು ಮರೆಯದಂತೆ || 3 ||

ಕಷ್ಟದಲ್ಲಿರಲಿ ಉತ್ಕೃಷ್ಟದಲ್ಲಿರಲಿ
ಎಷ್ಟಾದರೂ ಮತಿಗೆಟ್ಟಿರಲಿ
ಕೃಷ್ಣ ಕೃಷ್ಣ ಎಂದು ಶಿಷ್ಟರು ಪೇಳುವ
ಅಷ್ಟಾಕ್ಷರ ಮಹಾ ಮಂತ್ರದ ನಾಮದ || 4 ||

ಕನಸಿನೊಳಾಗಲಿ ಕಳವಳಿಕಾಗಲಿ
ಮನಸುಗೊಟ್ಟಿರಲಿ ಮುನಿದಿರಲಿ
ಜನಕಜಾಪತಿ ನಿನ್ನ ಚರಣ ಕಮಲವನು
ಮನಸಿನೊಳಗೆ ಒಮ್ಮೆ ನೆನೆಸಿಕೊಳ್ಳುವ ಹಾಗೆ || 5 ||

ಜ್ವರ ಬಂದಾಗಲು ಚಳಿ ಬಂದಾಗಲು
ಮರಳಿ ಮರಳಿ ಮತ್ತೆ ನಡೆವಾಗಲು
ಹರಿ ನಾರಾಯಣ ದುರಿತ ನಿವಾರಣ
ಇರುಳು ಹಗಲು ನಿನ್ನ ಸ್ಮರಣೆ ಮರೆಯದಂತೆ || 6 ||

ಸಂತತ ಹರಿ ನಿನ್ನ ಸಾಸಿರ ನಾಮವ
ಅಂತರಂಗದಾ ಒಳಗಿರಿಸಿ
ಎಂತೋ ಪುರಂದರ ವಿಠ್ಠಲ ರಾಯನೆ
ಅಂತ್ಯ ಕಾಲದಲ್ಲಿ ಚಿಂತಿಸುವಂತೆ || 7 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹುಟ್ಟಿನಿಂದ ಸಾವಿನವರೆಗೆ ನಮ್ಮ ಸಾಮಾಜಿಕ ವ್ಯವಹಾರಗಳಲ್ಲಿ, ದೈನಂದಿನ ಜೀವನದಲ್ಲಿ ದೈವ ಚಿಂತನವು ಹಾಸುಹೊಕ್ಕಾಗಿ ನೆಯ್ದುಕೊಂಡು ಬರಬೇಕೆಂಬುದು ಪುರಂದರ ದಾಸರ ಆಶಯವಾಗಿದೆ. ಚಳಿ ಜ್ವರ ಹಸಿವು ಮೊದಲಾದವುಗಳು ದೇಹವನ್ನು ಕಾಡಿದಾಗ, ಕಷ್ಟ ಉತ್ಕೃಷ್ಟ ಸ್ಥಿತಿ ಬಂದಾಗ, ಪ್ರವಾಸದಲ್ಲಿದ್ದಾಗ, ಸಮಾಜದ ಜನರೊಂದಿಗೆ ಸಂಭಾಷಿಸುವಾಗ ದೈವ ಚಿಂತನ ಜೊತೆಗಿರಲೇಬೇಕೆಂದು ಅವರು ಪ್ರತಿಪಾದಿಸುತ್ತಾರೆ.

**ಸಾರ** = ರಸವತ್ತಾದ

**ಖೋಡಿ ವಿನೋದ** = ಮಂಗ ಚೇಷ್ಟೆ

**ಕಾರಣಾರ್ಥಗಳೆಲ್ಲ** – ಶುಭ ಕಾರ್ಯ

**ನರಸಾರಥಿ** – ಅರ್ಜುನನಿಗೆ ಸಾರಥಿ; ಮನುಷ್ಯರಿಗೆ ಪ್ರೇರಕ, ನಿಯಾಮಕ.

**ವಸುದೇವಾತ್ಮಜ** = ಕೃಷ್ಣ

**ಶಿಶುಪಾಲಕ್ಷಯ** = ಶಿಶಿಪಾಲನನ್ನು ಕೊಂದವ, ಕೃಷ್ಣ

**ಕಸವಿಸಿ** – ದೇಹ ಮನಸ್ಸುಗಳ ಬೇನೆ, ದುಗುಡ; ನೆಮ್ಮದಿಯಿಲ್ಲದಿರುವುದು.

**ಉತ್ಕೃಷ್ಟದಲಿ** – ಸುಖ ಲೋಲಾಪ್ತಿಯಲ್ಲಿ.

**ಅಷ್ಟಾಕ್ಷರ ಮಹಾಮಂತ್ರ** – 'ಓಂ ನಮೋ ನಾರಾಯಣಾಯ' ಎನ್ನುವ ಮಂತ್ರ.

**ಅಂತ್ಯಕಾಲದಲ್ಲಿ ಚಿಂತಿಸೋ ಹಾಗೆ** – ಕಡೆಗಾಲದಲ್ಲಿ ಪರಮಾತ್ಮನ ಕಡೆ ಮನಃ ಪ್ರಾವಣ್ಯ ಒದಗಬೇಕಾದರೆ ಮೊದಲೇ ಮನಃಪ್ರಾವಣ್ಯದ ಸಂಸ್ಕಾರವಿರಬೇಕು ಮತ್ತು ಕಡೆಗಾಲದಲ್ಲಿ ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿ ಹರಿಯ ಚಿಂತನೆ ಒದಗಬೇಕಾದರೆ ಪರಮಾತ್ಮನ ಅನುಗ್ರಹವಿರಬೇಕು. ಎರಡಕ್ಕೂ ಸಿದ್ಧತೆಯನ್ನು ಈಗಲೇ ಮಾಡಿಕೊಳ್ಳಬೇಕೆಂದು ಹರಿದಾಸರ ಆಶಯ.

**ಜನಕಜಾ** = ಜನಕ ರಾಜನ ಮಗಳು, ಸೀತಾ ದೇವಿ

**ಸಾಸಿರ ನಾಮ** = ಸಹಸ್ರ ನಾಮ ವಿಷ್ಣು

**Classification:** Keerthane
**Ankita:** purandara vittala
**Location:** NA
**Category:** Artha Bhava, nama smarane
**Sub-Category:** Narayana, smarane, amruta, papa, ooru, Krishna, Vishnu, santosha, shishupala, asura, kanasu, mana, sita, padma, irulu, hagalu, chinte
**Pravachana:** NA
**Explanation:** NA